## *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

*ಎಸ್.ಸಿ.* 257/2021

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ರಮೇಶ್ | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ ಶ್ರೀ ಸಿದ್ದಪ್ಪ | | **12.08.2024** |
| **ವಯಸ್ಸು** | ಃ **42** ವರ್ಷ | | |
| **ವೃತ್ತಿ** | ಃ ರಿಯಲ್ ಎಸ್ಟೇಟ್ | **ಪ್ರಾ.ಸಾ.** ಃ | **03** |
| **ವಾಸಸ್ಥಳ** | ಃ ರಾಘವೇಂದ್ರ ನಗರ ಮೈಸೂರು | **ಚಾ.ಸಾ.** ಃ | **03** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಕೋರ್ಟ್ ಮುಂದೆ ಇರುವ ಆರೋಪಿತರ ಪರಿಚಯ ಇಲ್ಲ. ಅವರನ್ನು ಗಲಾಟೆ ದಿನ ಮತ್ತು ಪೋಲೀಸ್ ಠಾಣೆಯಲ್ಲಿ ನೋಡಿದ್ದೇನೆ. ಚಾ.ಸಾ-1, 2 ಮತ್ತು ನಾನು ಸ್ನೇಹಿತರಿರುತ್ತೇವೆ. ದಿಃ02.10.2020 ರಂದು ಚಾ.ಸಾ-1 ರವರ ಬರ್ತ್ ಡೇ ಇದ್ದು ಅ ದಿನ ಅವರು ಸಿಕ್ಕಿಲ್ಲವಾದ್ದರಿಂದ ದಿಃ*04.10.2020* ರಂದು ನಾನು ಮತ್ತು ಚಾ.ಸಾ*-2, 8.30-9* ಗಂಟೆ ವೇಳೆಯಲ್ಲಿ ಚಾಸಾ*-1* ರವರ ಮನಗೆ ಹೋಗಿದ್ದೆವು. ಆ ದಿನ ರಾತ್ರಿ *12* ಗಂಟೆ ವೇಳೆಯಲ್ಲಿ ಎಂ.ಜಿ. ರಸ್ತೆಯಲ್ಲಿನ ಟೀ ಅಂಗಡಿಗೆ ಟೀ ಕುಡಿಯಲು ಹೋಗಿದ್ದೆವು. ಟೀ ಕುಡಿದು *12.30* ರ ಸಮಯದಲ್ಲಿ ವಾಪಸ್ಸು ಬರುತ್ತಿರುವಾಗ ಜೆ.ಎಸ್.ಎಸ್ ಆಸ್ಪತ್ರೆ ಮುಂಭಾಗದಲ್ಲಿರುವ ರೋಡ್ ಹಂಪ್ಸ್ ಬಳಿ ಬಂದಾಗ ಕೋರ್ಟ್ ಮುಂದೆ ಇರುವ ಆರೋಪಿತರು ಮತುತ ಇನ್ನಿಬ್ಬರು ವ್ಯಕ್ತಿಗಳು ಕಾರಿಗೆ ಕೈ ಅಡ್ಡ ಹಾಕಿದ್ದರು. ಆ ಕಾಲಕ್ಕೆ ನಾನೇ ಕಾರನ್ನು ಓಡಿಸುತ್ತಿದ್ದೆ. ಆಗ ನಾವು ಏನು

ಎಂದು ವಿಚಾರಿಸಲು ಕಾರನ್ನು ನಿಲ್ಲಿಸಿದಾಗ ಇಬ್ಬರು ಆರೋಪಿತರು ನನಗೆ ಹೊಡೆದಿದ್ದರು. ಆಗ ಪವನ್ ಮತ್ತು ನವೀನ್ ಇವರು ಕಾರಿನಿಂದ ಇಳಿದು ಯಾಕೆ ಹೊಡೆಯುತ್ತಿದ್ದೀಯಾ ಎಂದು ಕೇಳಿದಾಗ *1* ನೇ ಆರೋಪಿತ ರೇಜರ್ ನಿಂದ ನವೀನ್ ಕುಮಾರ್ ಗೆ ಹೊಡೆದಿದ್ದ ಆಗ ನಾನು ಬಿಡಿಸಲು ಹೋದಾಗ ನನಗೆ ಕೈ ಬೆರಳು ಮತ್ತು ಬಾಯಿ ಹತ್ತಿರ ಏಟಾಗಿತ್ತು. ಈ ಬಗ್ಗೆ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ. ನನಗೆ ಹೆಚ್ಚಿನ ಗಾಯಗಳು ಆಗಿಲ್ಲವಾದ್ದರಿಂದ ಸಿದ್ದಾರ್ಥನಗರದಲ್ಲಿ ಇರುವ ಶೋಭಾ ಕ್ಲಿನಿಕ್ ನಲ್ಲಿ ಚಿಕಿತ್ಸೆ ಪಡೆದಿದ್ದೆ. ಈಗ ನಾನು ನೋಡುತ್ತಿರುವ ಎಂ.ಒ *1* ಎಂದು ಗುರುತಿಸಿರುವ ರೇಜರ್ ಆ ಘಟನೆ ಕಾಲಕ್ಕೆ *1* ನೇ ಆರೋಪಿತ ಹಲ್ಲೆ ಮಾಡಲು ಉಪಯೋಗಿಸಿದ್ದ ರೇಜರ್ ಇರುತ್ತದೆ.

<u>ಪಾಟೀ ಸವಾಲು ಃ ಆರೋಪಿ ಪರ ವಕೀಲರು ಸಮಯ ಕೋರಿದ್ದು ಸೂಕ್ತ ಕಾರಣ ಹೇಳದೇ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.</u>

<u>ಮರು ವಿಚಾರಣೆಃ- ಇಲ್ಲ.</u>

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು